'ಈ ಪಯಣದಲ್ಲಿ ನಮ್ಮ ಜೊತೆ ಜೊತೆಯಾಗಿ ಬರುವುದು ಇದೊಂದೇ...'

ನಮ್ಮೂರಿನ ಹಿರಿಯರೊಬ್ಬರು 'ಹೊಗೆಸೂನು' ಎಂಬ ಕಾವ್ಯನಾಮದಲ್ಲಿ ಕವನ ಬರೆಯುತ್ತಿದ್ದರು. ಹೊಗೆಸೂನು ಅಂದರೆ ಏನರ್ಥ? ಎಂದು ಕೇಳಿದರೆ, ಯೋಚನೆಮಾಡು ನಿನಗೇ ತಿಳಿಯುತ್ತದೆ ಎಂದು ಹೇಳುತ್ತಿದ್ದರು. 'ಬೆಂಕಿ ಇಲ್ಲದೆ ಹೊಗೆ ಏಳದು' ಎಂಬುದು ಗಾದೆಯ ಮಾತಾಯಿತು. ಬೆಂಕಿ, ಹೊಗೆಗಳನ್ನು ತಾತ್ವಿಕರು ಅನುಮಾನ ಪ್ರಮಾಣಗಳನ್ನು ವಿವರಿಸಲು ಬಳಸಿಕೊಳ್ಳುವುದು ನಮಗೆಲ್ಲ ಗೊತ್ತು. ಈಗ ವಿಷಯ ಏನೆಂದರೆ, ಮಾನವರಾಗಿ ಹುಟ್ಟಿದವರಲ್ಲಿ ಹೊಟ್ಟೆಯ ಕಿಚ್ಚಿಲ್ಲದವರು ಯಾರಾದರು ಇದ್ದಾರೆಯೇ? ಎಂಬುದು. ಕಿಚ್ಚಿದ್ದ ಮೇಲೆ ಅಲ್ಲಿ ಹೊಗೆಯೂ ಇರಲೇಬೇಕಲ್ಲ. ಅದರಲ್ಲೂ 'ಜೆಲಸೀ, ದೈ ನೇಮ್ ಈಸ್ ವುಮೆನ್' ಎಂದು ಶೇಕ್ಸ್‌ಪಿಯರ್ ಆಗ ಹೇಳಿದ್ದು ಈಗಲೂ ಹೌದಾದರೆ ಹೆಂಗಸರ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಮತ್ಸರದ ಮರ್ತ್ಯರೇ ಆಗಿರುತ್ತಾರೆ ಎಂಬುದಕ್ಕೆ ಯಾವ ಅನುಮಾನ ಪ್ರಮಾಣಗಳೂ ಬೇಕಾಗಿಲ್ಲ ಅಲ್ಲವೇ? ತುಂಬಾ ಯೋಚನೆ ಮಾಡಿದ ಅನಂತರ, ಹೀಗೊಂದರ್ಥದಲ್ಲಿ ನಾವೆಲ್ಲರೂ ಹೊಗೆಸೂನುಗಳೇ ಅನಿಸಿತು.

ಧೂಮ ಪುರಾಣವನ್ನು ಹೇಳುವುದು ಈ ಬರಹದ ಉದ್ದೇಶ ಖಂಡಿತ ಅಲ್ಲ. ಏನೋ ನೆನಪಾಯಿತು. ಅದನ್ನು ಆಮೇಲೆ ಹೇಳುವೆ. ಈಗ ಇದನ್ನು ಕೇಳಿ. ಹಿಂದೊಬ್ಬ ಧೂಮಪ್ರೇಮಿ ಇದ್ದ. ಧೂಮಪ್ರೇಮಿ ಎಂದರೆ ಚೈನ್ ಸ್ಮೋಕರ್ ಎಂದೋ, ವಿರಹದಿಂದ ಸಿಗರೇಟು ಹಚ್ಚುವವನು ಎಂದೋ ಅನ್ಯಥಾ ಭಾವಿಸಬೇಡಿ. ನಮ್ಮ ಸ್ಮೋಕ್ ರೈಡರಿಗೆ ಅಂತಹ ಅಭ್ಯಾಸಗಳೇನೂ ಇರಲಿಲ್ಲ. ಒಂದೊಮ್ಮೆ ಇದ್ದರೂ ಅವೆಲ್ಲ ಈ ಅಗೋಚರನ ಬೈಕಿನ ಧೂಮದಿಂದ ಈಚೆಗೆ ಬಂದು ಕಣ್ಗೋಚರವಾಗುವುದು ಸಾಧ್ಯವಿಲ್ಲದ ಮಾತು. ಈ ಧೂಮರಾಯ ನಮ್ಮ ಕಾಲೇಜಿನ ಯಾವುದೋ ಹೆಣ್ಣಿನ ಮೇಲೆ ಕಣ್ಣಿಟ್ಟು ಅದನ್ನು ಈಡೇರಿಸಿ ತನ್ನ ಕಣ್ಣುಗಳನ್ನು ಪಾವನಗೊಳಿಸಿಕೊಳ್ಳಲು ಕಾಲೇಜು ಗೇಟಿನ ಎದುರು ಎರಡು ಹೊತ್ತು ಡ್ಯೂಟಿ ಹಚ್ಚಿಕೊಳ್ಳುತ್ತಿದ್ದವನು. ಹೇಳಿಕೇಳಿ ಖಾಸಗಿ ಕಾಲೇಜು. ನಿಯಮಗಳು ಜಾಸ್ತಿ. ಆದರೂ... ಯಾವುದೋ ಗ್ಯಾರೇಜಿನಲ್ಲಿ ಮೆಕ್ಯಾನಿಕ್ ಆಗಿದ್ದವನು ರಿಪೇರಿಗೆಂದು ಬಂದ ಬೈಕುಗಳನ್ನು ತನ್ನ ಸ್ವಸೇವೆಗೆ ವಿನಿಯೋಗಿಸುವಾಗ ಕೊಲ್ಲಿಯ ಪೆಟ್ರೋಲಿಗೆ ತನ್ನ ಮನೆಯ ಸೀಮೆಎಣ್ಣೆ ಬೆರೆಸಿ ಸೀಮೆಗೆಲ್ಲ ಹೊಗೆ ಹಾರಿಸುತ್ತಿದ್ದವನು. ಅವನು ಆಚೀಚೆ ಓಡಾಡುತ್ತಿದ್ದರೆ ಕಾಣಿಸುತ್ತಿದ್ದುದು ಬರಿಯ ಹೊಗೆ ಮಾತ್ರ. ಇನ್ನು ಅವನ ಹುಡುಗಿ ಅವನನ್ನು ಮೆಚ್ಚುವುದು?

ಇರಲಿ, ಧೂಮ ಎಂದಾಗ ಇನ್ನೊಂದು ನೆನಪಾಯ್ತು. ನೆನ್ನೆ ರಾತ್ರಿ ಯಜಮಾನರು ನಿದ್ದೆಯಲ್ಲಿ ಧೂಮ ಧೂಮ ಎಂದು ಬಡಬಡಿಸುತ್ತಿದ್ದರು. ಹಣದ ಅಗತ್ಯ ಇರುವಾಗ ಬಂದು, ಬೀಡಿ ಧೂಮದಿಂದ ಕಪ್ಪಾದ ಹಲ್ಲನ್ನು ಗಿಂಜುತ್ತಾ, ಸಣ್ಣ ಪುಟ್ಟ ಕೆಲಸಗಳಿಗೆ ಒದಗಿ ಬರುವ, ಕಿಸೆಗೆ ಹಣವಿಳಿದ ಕೂಡಲೆ ಮಾಯವಾಗುವ ದೂಮ ಅವನ ಮಗಳ ಮನೆಗೆ ಹೋಗಿ ತಿಂಗಳು ಒಂದಾಯಿತು. ಇನ್ನು ಅವನು ಬರುವುದು ಲಾಕ್‌ಡೌನ್ ಮುಗಿದ ಅನಂತರವೇ ಎಂದು ನಿದ್ದೆಯಲ್ಲಿದ್ದ ಗಂಡನಿಗೆ ಮನದಟ್ಟು ಮಾಡಿಕೊಡಲು ಪ್ರಯತ್ನಿಸಿ ಸೋತೆ. ಈಚೆಗೆ ಅವರು ಪಂಪನನ್ನು ಹೆಚ್ಚು ಹಚ್ಚಿಕೊಂಡು, ಯಶವನ್ನು ಕಪ್ಪಾಗಿಸಿಕೊಂಡ ಅವನ ಅಧ್ವರ ಧೂಮದ ಬಗ್ಗೆ ತಲೆತುರಿಸಿಕೊಳ್ಳುತ್ತಿರುವುದರಿಂದ ಹೀಗಾಗಿರಬಹುದೆಂದು ಎಣಿಸಿ ಸುಮ್ಮನಾದೆ.

ನನ್ನ ಮನೋಪಟಲದಲ್ಲಿ ಉಳಿದ ಇನ್ನೊಬ್ಬನೇ ಒಬ್ಬ ಧೂಮನ ಬಗ್ಗೆ ಹೇಳಿಬಿಡುತ್ತೇನೆ. ಅವನೇ ಧೂಮ್ರಾಕ್ಷ... ದೈತ್ಯ ರಾಕ್ಷಸ, ರಾವಣನ ಸೇನಾಪತಿಯಂತೆ. ಮಳೆಗಾಲದಲ್ಲಿ ದಟ್ಟ ಕಾವಳ ಆವರಿಸಿಕೊಂಡಾಗ ಅದು ಈ ವಾರ್ ಕಮಾಂಡರನ ಕಣ್ಣಿನ ಕೋಪದ ಹೊಗೆ ಎಂದು ಕಥೆ ಹೇಳುವವರು ನಮ್ಮನ್ನು ಹೆದರಿ ಮುದುರುವಂತೆ ಮಾಡುತ್ತಿದ್ದರು. ಯಾವಾಗ ಯಜಮಾನರು ಆದಿಕವಿ ಪಂಪನ ಯಜನ ಧೂಮದ ಬಗ್ಗೆ ಯದ್ವಾತದ್ವಾ ತಲೆಕೆಡಿಸಿಕೊಳ್ಳಲು ಪ್ರಾರಂಭಿಸಿದರೋ